ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳು ಸಂಕೇಶ್ವರಕ್ಕೆ ಬಂದಿದ್ದಾಗ ೨ ಕೋಟಿ ರೂಪಾಯಿ ಕೊಡುತ್ತೇನೆಂದು ಸಾರ್ವಜನಿಕವಾಗಿ ಹೇಳಿಕೆ ಮಾಡಿದ್ದಾರೆ. ಈ ಸದನದಲ್ಲಿಯೂ ಸಹ ಹೇಳಿದ್ದಾರೆ. ಕಳೆದ ಏಳೆಂಟು ದಿವಸಗಳಲ್ಲಿ ನಗರಾಭಿವೃದ್ಧಿ ಮಂತ್ರಿಗಳು ಹಾನೂ ನೀವು ಸೇರಿ ಅದನ್ನು ಫೈನಲ್ ಮಾಡೋಣವೆಂದು ಹೇಳಿದ್ದಾರೆ. ಇಲ್ಲಿ ವಿಟಮಿನ್ 'ಎಂ' ಏನೂ ಬೇಕಾಗಿಲ್ಲ. ಲಕ್ಷ್ಮೀ ಮತ್ತು ಸಾಗರ ಕೂಡಿದರೆ ಅದು ಆಗಂತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯ ಮಂತ್ರಿಗಳ ಸಮಯ ನೋಡಿಕೊಂಡು ಭೇಟಿಯಾಗೋಣ.

## ಚಳ್ಳಕೆರೆ ತಾಲ್ಲೂಕಿನ ಹಳ್ಳಿಯ ಕೊಳವೆ ಬಾವಿಗಳ ಬಗ್ಗೆ

೬೯೭. (ಸ) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಳ್ಳಕೆರೆ ತಾಲ್ಲೂಕಿನ ಹಳ್ಳಿಗಳಲ್ಲಿ ಕಂಡಿಯುವ ನೀರಿಗೋಸ್ಕರ ತೋಡಿಸಿದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು, ಹಾಗೂ ಅವುಗಳಲ್ಲಿ ಎಷ್ಟು ವಿಫಲವಾಗಿವೆ ?

ಆ) ಕೆಲವು ಬಾವಿಗಳಲ್ಲಿ ನೀರಿದ್ದು ದುರಸ್ಥಿಯಿಲ್ಲದೆ ಉಪಯೋಗಕ್ಕೆ ಬಾರದಿರುವ ಬಾವಿಗಳ ಸಂಖ್ಯೆ ಎಷ್ಟು, ಇವುಗಳ ದುರಸ್ಥಿಗೆ ಸರಕಾರದವರು ತ್ವರಿತವಾಗಿ ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ತೋಡಿಸಿಲಾದ ಕೊಳವೆ ಬಾವಿಗಳ

| | |
|---|---|
| ಸಂಖ್ಯೆ | ೧೦೫೧ |
| ವಿಫಲವಾದವುಗಳು | ೧೩೨ |

ಆ) ದುರಸ್ತಿ ಇಲ್ಲದೆ ನೀರಿರುವ ಕೊಳವೆ ಬಾವಿಗಳು ಉಪಯೋಗಕ್ಕೆ ಬಾರದೇ ಇರುವುದು ಯಾವುದೂ ಇರುವುದಿಲ್ಲ.

ನೀರಿರುವ ಕೊಳವೆ ಬಾವಿಗಳ ಕೈಪಂಪುಗಳು ಕೆಟ್ಟ ಕೂಡಲೇ ದುರಸ್ತಿ ಮಾಡಲಾಗುತ್ತದೆ.

ಶ್ರೀ ತಿಪ್ಪೇಸ್ವಾಮಿ.— ಮಾನ್ಯ ಅಧ್ಯಕ್ಷರೆ ಏನಾಗಿದೆ ಅಂದರೆ, ಕೆಲವು ಬೋರ್‌ಗಳಲ್ಲಿ ಅಕಸ್ಮಾತಾಗಿ ಪೈಪು ಒಳಗೆ ಹೋಗಿ ನೀರು ಬಾರದೆ ತೊಂದರೆಯಾಗಿರುತ್ತದೆ. ಬೋರನ್ನು ರಿಪೇರಿ ಮಾಡಿದರೆ ಅವು ಉಪಯೋಗಕ್ಕೆ ಬರತ್ತವೆ. ಅಂಥ ರಿಪೇರಿಯನ್ನು ಮಾಡಿಸಲಾಗುತ್ತದೆಯೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಂತಹ ಗ್ರಾಮಗಳಲ್ಲಿ ಈ ಕೆಲಸವಿದೆಯೆಂದು ಮಾನ್ಯ ಸದಸ್ಯರು ಬರೆದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

### ಮೈಸೂರು ನಗರ ಯೋಜನಾ ಪ್ರಾಧಿಕಾರದಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರ ಬಗ್ಗೆ.

೬೯೪. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರ ಯೋಜನಾ ಪ್ರಾಧಿಕಾರದಲ್ಲಿ ಹಂಗಾಮಿಯಾಗಿ ಎಷ್ಟು ಮಂದಿ ಕೆಲಸ ಮಾಡುತ್ತಿದ್ದಾರೆ ಹಾಗೂ ಎಷ್ಟು ವರ್ಷಗಳಿಂದ,